# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ:ತು.ವಿ:ಅವಿ:2024-25/ 1159 ದಿನಾಂಕ:13.06.2024

## ಅಧಿಸೂಚನೆ

**ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿರುವ SC/ST ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವ ಸಂಬಂಧ ಅರ್ಜಿಗಳನ್ನು ಆಹ್ವಾನಿಸುತ್ತಿರುವ ಕುರಿತು.**

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:12.06.2024(ಕಂಡಿಕೆ–20)

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022–23 ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿಗಳಾಗಿ ನೋಂದಣಿ ಮಾಡಿಕೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಯೋಜನೆ ಘಟಕ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಮಾಹೆಯಾನ ಶಿಷ್ಯವೇತನವನ್ನು ಮಂಜೂರಾತಿ ಸಂಬಂಧ ಈ ಕೆಳಕಂಡ ಅಗತ್ಯ ದಾಖಲೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ತಿಳಿಸಲಾಗಿದೆ.

**ಲಗತ್ತಿಸಬೇಕಾದ ವಿದ್ಯಾರ್ಥಿಗಳ ದಾಖಲೆಗಳ ವಿವರ:**

1. ನಿಗಧಿತ ಅರ್ಜಿ ನಮೂನೆ
2. ಪೂರ್ಣಕಾಲಿಕ ಪಿಹೆಚ್.ಡಿ. ನೋಂದಣಿ ಪತ್ರ.
3. ಪ.ಜಾ./ಪ.ಪಂ ಪ್ರಮಾಣ ಪತ್ರ.
4. ಆದಾಯ ಪ್ರಮಾಣ ಪತ್ರ.
5. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಶೀಷ್ಯವೇತನ ಪಡೆಯದ ಕುರಿತು ಘೋಷಣಾ ಪತ್ರ.
6. ಬ್ಯಾಂಕ್ ಖಾತೆಯ ವಿವರ
7. ಇತರೆ ಅಗತ್ಯ ದಾಖಲೆಗಳು

ಮೇಲ್ಕಂಡ ದಾಖಲೆಗಳನ್ನು ಹಾಗೂ ನಿಗಧಿತ ಅರ್ಜಿಯನ್ನು ಭರ್ತಿಮಾಡಿ ಸಂಬಂಧಿಸಿದ ಮಾರ್ಗದರ್ಶಕರ ಹಾಗೂ ವಿಭಾಗದ ಅದ್ಯಕ್ಷರು/ಮುಖ್ಯಸ್ಥರು/ಸಂಯೋಜಕರ ಶಿಫಾರಸ್ಸಿನೊಂದಿಗೆ/ದೃಢೀಕರಣದೊಂದಿಗೆ ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರಿಗೆ ದಿನಾಂಕ:28.06.2024 ರೊಳಗಾಗಿ ಸಲ್ಲಿಸುವುದು

**ಆದೇಶದ ಮೇರೆಗೆ**

ಕುಲಸಚಿವರು
ಕುಲಸಚಿವರು
**ತುಮಕೂರು ವಿಶ್ವವಿದ್ಯಾನಿಲಯ**

**ಪ್ರತಿಗಳು:**

1. ನಿರ್ದೇಶಕರು, ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಂಚಾಲಕರು, ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು:–ಸಂಬಂಧಪಟ್ಟ Ph.D ಸಂಶೋಧನಾ ವಿದ್ಯಾರ್ಥಿಗಳ ಗಮನಕ್ಕೆ ತರುವುದು.
3. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು:–**ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಅಧಿಸೂಚನೆ ಮತ್ತು ಅರ್ಜಿ ನಮೂನೆಯನ್ನು ಪ್ರಕಟಿಸುವುದು**
4. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಚೇರಿ ಪ್ರತಿ.

NHD24

## ತುಮಕೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (SC/ST) ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನ

## ಅರ್ಜಿ ನಮೂನೆ

ಇತ್ತೀಚಿನ ಭಾವ ಚಿತ್ರವನ್ನು ಅಂಟಿಸುವುದು.

ಇವರಿಗೆ,
ಕುಲಸಚಿವರು,
ತುಮಕೂರು ವಿಶ್ವವಿದ್ಯಾನಿಲಯ,
ತುಮಕೂರು.

ಮಾನ್ಯರೆ,

ವಿಷಯ: 2022-23 ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (SC/ST) ಪಿಹೆಚ್.ಡಿ. ಸಂಶೋಧನಾ ವಿದ್ಯಾರ್ಥಿವೇತನಕ್ಕಾಗಿ ಅರ್ಜಿ.

ಉಲ್ಲೇಖ: ವಿಶ್ವವಿದ್ಯಾನಿಲಯದ ಅಧಿಸೂಚನೆ ದಿನಾಂಕ:13.06.2024

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಯನ್ವಯ ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2022-23ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಡಿ ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿ ವಿದ್ಯಾರ್ಥಿವೇತನಕ್ಕಾಗಿ ಮನವಿ.

| ಕ್ರ ಸಂ | ವಿವರ | ಮಾಹಿತಿಯನ್ನು ಭರ್ತಿಮಾಡುವುದು. |
|---|---|---|
| 1 | ಸಂಶೋಧನಾರ್ಥಿಯ ಹೆಸರು | |
| 2 | ಸಂಶೋಧನಾರ್ಥಿಯ ತಂದೆ/ತಾಯಿ ಹೆಸರು | |
| 3 | ಪೂರ್ಣ ವಿಳಾಸ & ಮೊಬೈಲ್ ಸಂಖ್ಯೆ | |
| 4 | ಸಂಶೋಧನಾ ವಿಭಾಗದ ಹೆಸರು | |
| 5 | ಸಂಶೋಧನಾ ಮಾರ್ಗದರ್ಶಕರ ಹೆಸರು ಮತ್ತು ವಿಭಾಗ | |
| 6 | ಪೂರ್ಣಕಾಲಿಕ ನೋಂದಣಿ ಸಂಖ್ಯೆ ಮತ್ತು ದಿನಾಂಕ (ಖಾಯಂ ನೊಂದಣಿ ಪತ್ರದ ಪ್ರತಿ ಲಗತ್ತಿಸತಕ್ಕದ್ದು) | |
| 7 | ಪಿಹೆಚ್.ಡಿ. ಸಂಶೋಧನೆಯ ಶೀರ್ಷಿಕೆ (Title of Ph.D Research) | |
| 8 | ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಪ್ರತಿ ಲಗತ್ತಿಸತಕ್ಕದ್ದು) | |
| 9 | ಸ್ವ-ಘೋಷಣಾ ಪತ್ರ (Self Declaration ) (ಪ್ರತಿ ಲಗತ್ತಿಸತಕ್ಕದ್ದು) | |

| | | |
|---|---|---|
| 10 | ಬ್ಯಾಂಕ್ ಖಾತೆಯ ವಿವರ<br>(ಬ್ಯಾಂಕ್ ಪಾಸ್ ಬುಕ್ ನಕಲು ಪ್ರತಿ ಲಗತ್ತಿಸತಕ್ಕದ್ದು) | |
| 11 | ಇತರೆ ಯಾವುದಾದರೂ ಫೆಲೋಶಿಫ್ / ಸ್ಕಾಲರ್‌ಶಿಫ್ ಪಡೆಯುತ್ತಿರುವಿರಾ?<br>(ಹೌದಾದಲ್ಲಿ ಅಗತ್ಯ ದಾಖಲೆಗಳು ಲಗತ್ತಿಸತಕ್ಕದ್ದು.) | |

**ಸೂಚನೆ:** ಕ್ರಮ ಸಂಖ್ಯೆ-04,05,06,08,09 ಹಾಗೂ 10 ರ ದೃಢೀಕೃತ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸುವುದು.

ಈ ಮೇಲ್ಕಂಡ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿ ಮತ್ತು ಅರ್ಜಿಯೊಂದಿಗೆ ಲಗತ್ತಿಸಿರುವ ದಾಖಲೆಗಳು ನೈಜ ಮಾಹಿತಿ /ದಾಖಲೆಯಾಗಿರುತ್ತವೆ ಮತ್ತು ನಾನು ಪೂರ್ಣಕಾಲಿಕ ಪಿಹೆಚ್.ಡಿ. ಸಂಶೋಧನಾರ್ಥಿಯಾಗಿರುತ್ತೇನೆಂದು ಮತ್ತು ಇತರೆ ಯಾವುದೇ ಸಂಘ, ಸಂಸ್ಥೆಗಳಿಂದ ಮತ್ತು ಸರ್ಕಾರ, ಸರ್ಕಾರೇತರ ಸಂಸ್ಥೆಗಳಿಂದ ಯಾವುದೇ ವಿದ್ಯಾರ್ಥಿವೇತನವನ್ನು ಪಡೆಯುತ್ತಿಲ್ಲ ಎಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

**ಸಂಶೋಧನಾರ್ಥಿಯ ಸಹಿ**

ಮೇಲ್ಕಂಡ ಪಿಹೆಚ್.ಡಿ. ಸಂಶೋಧನಾರ್ಥಿಯು ನಮೂದಿಸಿರುವ ಮಾಹಿತಿ ಮತ್ತು ಲಗತ್ತಿಸಿರುವ ದಾಖಲೆಗಳನ್ನು ಕಚೇರಿಯ ದಾಖಲೆಗಳೊಂದಿಗೆ ಪರಿಶೀಲಿಸಲಾಗಿ, ದಾಖಲೆಗಳು ತಾಳೆಯಾಗಿರುತ್ತವೆ ಮತ್ತು ನೈಜವಾಗಿರುತ್ತವೆ ಎಂದು ದೃಢೀಕರಿಸಲಾಗಿದೆ. ಈ ಸಂಶೋಧನಾರ್ಥಿಯು ವಿದ್ಯಾರ್ಥಿವೇತನ ಪಡೆಯಲು ಅರ್ಹರಾಗಿರುತ್ತಾರೆ ಎಂದು ಶಿಫಾರಸ್ಸು ಮಾಡಲಾಗಿದೆ.

**ಮಾರ್ಗದರ್ಶಕರ ಸಹಿ ಮೊಹರು**

**ಅಧ್ಯಕ್ಷರ/ಮುಖ್ಯಸ್ಥರ/ಸಂಯೋಜಕರ ಸಹಿ ಮೊಹರು**

ಸ್ಥಳ:
ದಿನಾಂಕ: